ಈ) ಸರ್ಕಾರವು ಇದನ್ನು ಪರಿಶೀಲಿಸುತ್ತದೆ.

ಉ) ಸರ್ಕಾರವು ಇದನ್ನು ಪರಿಶೀಲಿಸುತ್ತದೆ.

ಊ) ಇಲ್ಲ.

ಋ) ಅತಿವೃಷ್ಟಿ ಯೋಜನೆಯಲ್ಲಿ ಔಷಧಿಗಾಗಿ 1998-99ನೇ ಸಾಲಿನಲ್ಲಿ 10.00 ಲಕ್ಷ ರೂ.ಗಳ ಅನುದಾನವನ್ನು ಬಿಡುಗಡೆಗೊಳಿಸಲು ಕಂದಾಯ ಇಲಾಖೆಯನ್ನು ಕೋರಲಾಗಿದೆ.

ಅರಣ್ಯ ಇಲಾಖೆಯ ಆಯವ್ಯಯದ ಬಗ್ಗೆ

91(334)

ಶ್ರೀ ಪಿ.ಜಿ.ಆರ್.ಸಿಂಧ್ಯ (ಕನಕಪುರ): ಮಾನ್ಯ ಅರಣ್ಯ ಪರಿಸರ ಜೀವಿಶಾಸ್ತ್ರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದ ಅರಣ್ಯ ಇಲಾಖೆಗೆ ವಿವಿಧ ಬಾಬ್ತುಗಳಿಂದ ಪ್ರತಿ ವರ್ಷ ಸರ್ಕಾರಕ್ಕೆ ಬರುತ್ತಿರುವ ಆದಾಯವೇನು?

ಆ) ಅರಣ್ಯ ಇಲಾಖೆ ಸಿಬ್ಬಂದಿ ಸಂಬಳ ಸಾರಿಗೆ ಇತ್ಯಾದಿ ಬಾಬ್ತಿನ ವೆಚ್ಚ ಎಷ್ಟು?

ಇ) ಇತ್ತೀಚಿನ ಸುಪ್ರೀಂ ಕೋರ್ಟಿನ ತೀರ್ಪಿನ ಹಿನ್ನೆಲೆಯಲ್ಲಿ ಸರ್ಕಾರಕ್ಕೆ ಬರುವ ಆದಾಯ ಕುಂಠಿತವಾಗುತ್ತಿದೆಯೇ?

ಶ್ರೀ ಕೆ.ಎಚ್.ರಂಗನಾಥ್ (ಅರಣ್ಯ ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು):

ಅ) ಸರಾಸರಿ ವರ್ಷಕ್ಕೆ 100 ಕೋಟಿ ರೂಪಾಯಿಗಳು.

ಆ) ಸಂಬಳ, ಸಾರಿಗೆ ಸುಮಾರು ರೂ.73 ಕೋಟಿ ರೂಪಾಯಿಗಳು.

ಇ) ಹೌದು.

ತುಮಕೂರು ವಿಧಾನ ಸಭಾ ಕ್ಷೇತ್ರದಲ್ಲಿ ನೆಡು ತೋಪು.

93(213)